**ಓ.ಎಸ್. ನಂ. 93/2020** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 21.3.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಓ.ಎಸ್ 139/2023 ರ ದಾವಪತ್ರ, ಮಧ್ಯಂತರ ಅರ್ಜಿ ಸಂಖ್ಯೆ-3 ಮತ್ತು ಆದೇಶ ಪಟ್ಟಿಯ ದೃಢೀಕೃತ ನಕಲನ್ನು ನಿಡಿ16 ರಿಂದ ನಿಡಿ18 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಹೆಚ್.ಜಿ.ವಿ ರವರಿಂದಃ

ನಿಡಿ16 ರಿಂದ ನಿಡಿ18 ದಾಖಲೆಗಳನ್ನು ಯಾರಿಂದ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ನ್ಯಾಯಾಲಯದಿಂದ ಸಮನ್ಸ ಬಂದ ನಂತರ ಪಡೆದುಕೊಂಡಿರುತ್ತೇನೆ ಎನ್ನುವರು. ನಿಡಿ16 ರಲ್ಲಿ ಹೇಳಿರುವ 1 ರಿಂದ 3 ನೇ ವಾದಿಯರು ನನ್ನ ಸೋದರತ್ತೆಯರು. ಅವರು ಭಾಗಾಂಶ ಕೋರಿ ಸದರಿ ದಾವೆಯನ್ನು ಹಾಕಿರುತ್ತಾರೆ. ಸದರಿ ದಾವೆಯಲ್ಲಿ ಹೇಳಿರುವ ಆಸ್ತಿಯ ಸರ್ವೆ ನಂ.5/14 ರಲ್ಲಿ 8 ಎಕರೆ ಮತ್ತು 1/5 ರಲ್ಲಿ 3 ಚಿಲ್ಲರೆ ಎಕರೆ ಆಸ್ತಿ ಆಗಿರುತ್ತದೆ. ಸದರಿ ದಾವೆಯಲ್ಲಿ ನಾನು ನನ್ನ ತಕರಾರನ್ನು ಸಲ್ಲಿಸಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಈಗ ನ್ಯಾಯಾಲಯದಿಂದ ಸಮನ್ಸ ಬಂದಿದ್ದು ತಕರಾರನ್ನು ಸಲ್ಲಿಸಿರುವುದಿಲ್ಲ ಎನ್ನುವರು. ಓ.ಎಸ್ 30/2010 ರ ಆದೇಶವಾದ ನಂತರ ನಿಪಿ1 ರಂತೆ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಸೋದರತ್ತೆಯರಿಗೆ ಹೇಳಿ ನಾನೇ ನಿಡಿ16 ರಿಂದ ನಿಡಿ18 ರಲ್ಲಿ ಹೇಳಿರುವ ದಾವೆಯನ್ನು ಹಾಕಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ16 ರಿಂದ ನಿಡಿ18 ದಾಖಲೆಗಳನ್ನು ಯಾರು ಪಡೆದುಕೊಂಡಿರುತ್ತಾರೆ ಎಂದು ಗೊತ್ತಿರದಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯು ಇದೇ ನ್ಯಾಯಾಲಯದಲ್ಲಿ ತನಿಖೆಗೆ ಬಾಕಿ ಇರುತ್ತದೆ. ನಾನು ಮತ್ತು ಇತರ ಪ್ರತಿವಾದಿಯರು ಸೇರಿಕೊಂಡು ವಾದಿಯರಿಗೆ ಕ್ರಯಪತ್ರ ಬರೆದುಕೊಡಬೇಕಾಗುತ್ತದೆ ಎಂದು ಇನ್ನೊಂದು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ16 ರಿಂದ ನಿಡಿ18 ದಾಖಲೆಗಳನ್ನು ಸದರಿ ದಾವೆಯ ವಾದಿಯರೇ ಪಡೆದುಕೊಂಡು ನನಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎನ್ನುವರು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.